# ದೈವೀಭಾವ ಸೃಷ್ಟಿಸುವ ಶ್ರೀಖೋಲ್



ಮೃದಂಗವನ್ನೇ ಹೋಲುವ 'ಶ್ರೀಖೋಲ್' ಎಂಬ ಅವನದ್ಧ ವಾದ್ಯ ಉತ್ತರಾದಿ ಸಂಗೀತಕ್ಕೆ ಉತ್ತಮ ಸಾಥಿ ನೀಡುತ್ತದೆ. ಈ ವಾದ್ಯ ಉತ್ತರ ಭಾರತದಲ್ಲಿ ಜನಪ್ರಿಯ.

■ ಉಮಾ ವೇಣೂರು

ಅಯೋಧ್ಯೆಯಲ್ಲಿ ರಾಮಲಲ್ಲಾ ಪ್ರಾಣ ಪ್ರತಿಷ್ಠಾಪನಾ ಸಂದರ್ಭದಲ್ಲಿ (ಈ ವರ್ಷದ ಜ. 22ರಂದು) ದೇಶದ 50 ವಾದ್ಯಗಳ ಅಪೂರ್ವ ಸಂಗೀತ ನಾದರಸ ಲಹರಿ ಕಾರ್ಯಕ್ರಮ ನಡೆಯಿತು. ಈ ಕಛೇರಿಯಲ್ಲಿ ಸಿತಾರ್, ಸಾರಂಗಿ, ಸರೋದ್, ವೀಣೆ ಮುಂತಾದ ತಂತಿವಾದ್ಯಗಳ ಜೊತೆಗೆ ತಬಲಾ, ಮೃದಂಗ, ಪಖಾವಾಜ್‌ಗಳಂತಹ ಅವನದ್ಧ ವಾದ್ಯಗಳೂ ಸ್ವರ ಸಂಚಾರ ನಡೆಸಿದವು. ಈ ಅವನದ್ಧ ವಾದ್ಯಗಳೊಂದಿಗೆ 'ಶ್ರೀಖೋಲ್' ಎಂಬ ಮತ್ತೊಂದು ವಾದ್ಯವೂ ವಿಶಿಷ್ಟ ಲಯ, ನಾದದೊಂದಿಗೆ ಸಂಗೀತಮಯ ವಾತಾವರಣಕ್ಕೆ ತಂಪಿನ ಸಿಂಚನವನ್ನೂ ನೀಡಿತು.

ಅಷ್ಟಾಗಿ ಪ್ರಚಾರದಲ್ಲಿಲ್ಲದ ಶ್ರೀಖೋಲ್ ವಾದ್ಯ ಮೇಲ್ನೋಟಕ್ಕೆ ಪಖಾವಾಜ್ ಮತ್ತು ಮೃದಂಗದಂತೆಯೇ ಕಂಡರೂ ಇದರ ಲಯ, ನಾದ ವಿಭಿನ್ನ. ಉತ್ತರ ಭಾರತದಲ್ಲಿ ಹೆಚ್ಚು ಪ್ರಚಲಿತದಲ್ಲಿರುವ ಶ್ರೀಖೋಲ್ ಚರ್ಮವಾದ್ಯ 'ಸಾಮರಸ್ಯದ ಸಂಕೇತ' ಎಂದೂ ಬಿಂಬಿಸಲಾಗುತ್ತಿದೆ. ದಕ್ಷಿಣಾದಿ ಸಂಗೀತದಲ್ಲಿ ಮೃದಂಗವೇ ಪ್ರಧಾನ. ಅದೇ ರೀತಿ ಉತ್ತರಾದಿಯ ಭಕ್ತಿ ಸಂಗೀತಕ್ಕೆ ಶ್ರೀಖೋಲ್ ಸಾಥಿ ಇದ್ದರೆ ಹಾಡಿಗೊಂದು ದೈವೀಭಾವ ಪ್ರಾಪ್ತವಾಗುತ್ತದೆ ಎಂಬುದು ಕಲಾವಿದರ ಅಭಿಪ್ರಾಯ.

ಕರ್ನಾಟಕ ಸಂಗೀತ ಪಿತಾಮಹ ಪುರಂದರದಾಸರ ಕೈಯಲ್ಲಿದ್ದ ತಂಬೂರಿ ಸಾವಿರಾರು ಕೀರ್ತನೆಗಳಿಗೆ, ಸಾಮಾಜಿಕ ಪರಿವರ್ತನೆಗೆ ಸಾಕ್ಷಿಯಾಯಿತು. ಅದೇ ರೀತಿ ಶ್ರೀಖೋಲ್, ಅಸ್ಸಾಂನ ಧಾರ್ಮಿಕ–ಸಾಮಾಜಿಕ ಮನ್ವಂತರಕ್ಕೆ ಮಹಾಪುರುಷ ಶಂಕರದೇವ್ ಈ ಶ್ರೀಖೋಲನ್ನೇ ಬಳಸಿಕೊಂಡಿದ್ದರು ಎನ್ನುತ್ತದೆ ಸಂಗೀತ ಇತಿಹಾಸ.

ಐದನೇ ಶತಮಾನದಲ್ಲಿ ವಿಠ್ಠಲನ ಸ್ಮರಣೆ ಮಾಡುತ್ತಿದ್ದ ಚೈತನ್ಯ ಮಹಾಪ್ರಭುಗಳ ಸುತ್ತ ಶ್ರೀಖೋಲ್‌ನ ಸ್ವರ ಸಂಚಾರವೇ ಪ್ರಭಾವಳಿ ಸೃಷ್ಟಿಸುತ್ತಿತ್ತು. ಮಧ್ಯಕಾಲೀನ ಬಂಗಾಳಿ ಕವಿಗಳ ಕವಿತೆಗಳಿಗೆ ಸಂಗೀತಜ್ಞರಾದ ಗೋವಿಂದದಾಸ, ಜ್ಞಾನದಾಸ ಮುಂತಾದವರು ಶಾಸ್ತ್ರೀಯ ಸಂಗೀತ ಮಟ್ಟುಗಳನ್ನು ಹಾಕಿ ಹಾಡುವಾಗ ಶ್ರೀಖೋಲ್ ಅನ್ನೇ ಹಿನ್ನೆಲೆ ಸಂಗೀತಕ್ಕೆ ಬಳಸುತ್ತಿದ್ದರು. ಜೊತೆಗೆ ಒರಿಯಾ ಕೀರ್ತನೆಗಳಿಗೂ ಆಗ ಶ್ರೀಖೋಲ್ ವಾದ್ಯವೇ ಹೆಚ್ಚು ಬಳಕೆಯಾಗುತ್ತಿತ್ತು.

'ಮೃದಂಗವನ್ನು ಹೋಲುವ ಶ್ರೀಖೋಲ್ ವಾದ್ಯ ಶಾಸ್ತ್ರೀಯವಾಗಿ ನಮ್ಮಲ್ಲೂ ಬೆಳಗಬೇಕು. ಅದರ ಬಗ್ಗೆ ನಮ್ಮ ಈ ತಲೆಮಾರು ಸಂಗೀತಗಾರರಿಗೆ ಆಸಕ್ತಿ ಬೆಳೆಯಬೇಕು. ಸಂಗೀತಕ್ಕೆ ಯಾವುದೇ ಗಡಿ ಇಲ್ಲ. ಉತ್ತರ–ದಕ್ಷಿಣಾದಿಗಳು ಸೇರಿದರೆ ಮತ್ತೊಂದು ರೀತಿಯ ಸಂಗೀತ ರಸ ಹುಟ್ಟಬಹುದು. ಶ್ರೀಖೋಲ್ ಅನ್ನು ಮೃದಂಗದ ಜೊತೆಗೆ ಜುಗಲಬಂದಿಯಾಗಿಯೂ ನುಡಿಸಿ ಇದನ್ನು ಜನಪ್ರಿಯಗೊಳಿಸಲು ಸಾಧ್ಯವಿದೆ' ಎಂದು ಹೇಳುತ್ತಾರೆ ಬೆಂಗಳೂರಿನ ಮೃದಂಗ ಕಲಾವಿದರಾದ ವಿದ್ವಾನ್ ಆನೂರು ಅನಂತಕೃಷ್ಣ ಶರ್ಮ.

ಶ್ರೀಖೋಲ್ ವಾದ್ಯ ನುಡಿಸುವ ಕಲಾವಿದರ ಸಂಖ್ಯೆಯೂ ನಮ್ಮ ದೇಶದಲ್ಲಿ ಬಹಳ ಕಡಿಮೆ. ಈ ವಾದ್ಯವನ್ನು ಹೆಚ್ಚು ಬಳಕೆಗೆ ತಂದರೆ 'ಮೃದಂಗ–ಶ್ರೀಖೋಲ್' ಜುಗಲಬಂದಿ ಸಂಗೀತಪ್ರಿಯರ ಹೃದಯ ತಟ್ಟುವುದರಲ್ಲಿ ಸಂಶಯವಿಲ್ಲ. ■



ಬೆಂಗಳೂರಿನಲ್ಲಿ ನಡೆದ ಸಂಗೀತ ಕಛೇರಿಯೊಂದರಲ್ಲಿ ಶ್ರೀಖೋಲ್ ನುಡಿಸುತ್ತಿರುವ ಯುವಕಲಾವಿದರು